# ಮಾತಾಡು ಲಿಂಗವೇ...

ಕ್ಯಾನ್ಸರ್‌ಪೀಡಿತ ಬರಹಗಾರರೊಬ್ಬರು, ಅನಾರೋಗ್ಯದಿಂದಾಗಿ ಹೊರಗೆಲ್ಲೂ ಹೋಗಲಾಗದೆ ಮನೆಯೊಳಗೇ ಒಂಟಿತನ ಅನುಭವಿಸುತ್ತಿದ್ದರು. ಬೆಳಗಿನ ಉಪಾಹಾರದ ನಂತರ ಮಹಡಿಯೇರುತ್ತಿದ್ದ ಅವರು, ಗಂಟೆಗಳ ಕಾಲ ಕುಳಿತಲ್ಲಿಯೇ ಕುಳಿತಿರುತ್ತಿದ್ದರು. ನಿಮಗೆ ಬೇಸರವಾಗುವುದಿಲ್ಲವೆ? – ಗೆಳೆಯರೊಬ್ಬರು ಕೇಳಿದ ಪ್ರಶ್ನೆಗೆ ಅವರು ನೀಡಿದ ಉತ್ತರ: ಇಡೀ ದಿನ ಆಕಾಶದೊಂದಿಗೆ ಮಾತನಾಡುತ್ತಿರುತ್ತೇನೆ. ಬೇಸರಕ್ಕೆ ಸಮಯವಾದರೂ ಎಲ್ಲಿ?

ಆಕಾಶದೊಂದಿಗೆ ಮಾತು! ಹೇಗೆ ಸಾಧ್ಯ?

ಮಾತಿಗೆ ಅರ್ಥ ಬರುವುದು ಮತ್ತೊಂದು ಕಡೆಯಿಂದ ಉತ್ತರ ಬಂದಾಗಲಲ್ಲವೆ? ಇಬ್ಬರ ನಡುವಣ ಸಂವಹನ ಸಾಧ್ಯವಾದಾಗಷ್ಟೇ ಅದು ಮಾತು. ಇಲ್ಲದೆ ಹೋದರದು ಬರಿ ಬಡಬಡಿಕೆ. ಹಾಗೆಯೇ, ಮಾತು ಸಾಧ್ಯವಾಗುವುದು ನಿರ್ದಿಷ್ಟ ಭಾಷೆಯೊಂದನ್ನು ಮಾತನಾಡಲು ಬಲ್ಲ ಸಹಜೀವಿಗಳ ನಡುವೆ. ಮನುಷ್ಯ ಜೀವವುಳ್ಳವನು, ತನ್ನದೇ ಆದ ಭಾಷೆಯನ್ನು ಕಟ್ಟಿಕೊಂಡವನು. ಆಕಾಶಕ್ಕೆ ಹೀಗೆ ಹೇಳಲು ಬರುವುದೆ? ಇಂಥ ಜಿಜ್ಞಾಸೆಯ ಕಾರಣದಿಂದಾಗಿಯೇ ಬರಹಗಾರರು ಮತ್ತು ಆಕಾಶದ ನಡುವಿನ ಮಾತುಕತೆಯ ಕುರಿತ ಮಾತು ತಕ್ಷಣಕ್ಕೆ ತಮಾಷೆಯಂತೆ ತೋರುತ್ತದೆ. ಬರಹಗಾರರ ಅಸಹಾಯಕತೆ ಅರಿವಿಗೆ ಬಂದು, ಅವರ ಬಗ್ಗೆ ಮರುಕವೂ ಉಂಟಾಗಬಹುದು.

ಯೋಚಿಸಿ ನೋಡಿ. ಆಕಾಶದೊಂದಿಗೆ ಮಾತುಕತೆ ಯಾಕೆ ಸಾಧ್ಯವಿಲ್ಲ? ಮನುಷ್ಯನಂತೆ ಆಕಾಶಕ್ಕೆ ಜೀವವಿಲ್ಲ, ಅದಕ್ಕೊಂದು ಭಾಷೆಯಿಲ್ಲ ಎನ್ನುವುದು ನಿಜವೇ. ಆದರೆ, ಮಾತುಕತೆಯನ್ನು ಸಹಜೀವಿಗಳು ಹಾಗೂ ಭಾಷೆ ಬಲ್ಲವರ ನಡುವೆಯಷ್ಟೇ ಸಾಧ್ಯವಾಗುವ ಪ್ರಕ್ರಿಯೆ ಎಂದು ಯಾಕೆ ಭಾವಿಸಬೇಕು? ಗಮನಿಸಿನೋಡಿ: ಸಾಕುನಾಯಿಗಳೊಂದಿಗೆ ಮಾತನಾಡುತ್ತೇವೆ. ಮಾಲಿಕ ಹೇಳಿದ್ದು ನಾಯಿಗೆ, ನಾಯಿಯ ಕುಂಯ್‌ಗುಡುವಿಕೆ ಅದನ್ನು ಸಾಕಿದವರಿಗೆ ಅರ್ಥವಾಗುತ್ತದೆ. ದನಕರುಗಳ ಕುಶಲ ವಿಚಾರಿಸುವವರೂ ಇದ್ದಾರೆ. ಭಿನ್ನ ಭಾಷೆಗಳ ನಡುವೆ ಸಾಧ್ಯವಾಗುವ ಈ ಸಂವಹನ, ಕೆಲವೊಮ್ಮೆ ಗಿಡಮರಗಳೊಂದಿಗೂ ಸಾಧ್ಯವಾಗುತ್ತದೆ. ಗಿಡವನ್ನು ಜೀವದಂತೆ ಹಚ್ಚಿಕೊಂಡವರಿಗೆ ಅದರ ಕಷ್ಟಸುಖ ಅರಿಯುವ ಕಲೆಯೂ ಒಲಿದಿರುತ್ತದೆ. ಜನಸಾಮಾನ್ಯರ ಮಾತುಬಿಡಿ, ಜಗತ್ಪ್ರಸಿದ್ಧ ಸಸ್ಯವಿಜ್ಞಾನಿ ಜಗದೀಶಚಂದ್ರ ಭೋಸರೂ ಸಸ್ಯಗಳೊಂದಿಗೆ ಮಾತನಾಡುತ್ತಿದ್ದರಂತೆ. ನಿರ್ಜೀವ ವಸ್ತುಗಳೊಂದಿಗೂ ಸಂವಹನದ ಉದಾಹರಣೆಗಳು ನಮ್ಮ ನಡುವೆಯೇ ಕಾಣಸಿಗುತ್ತವೆ. ಸಂಗೀತಗಾರನ ಬೆರಳ ಸ್ಪರ್ಶಕ್ಕೆ, ಮನಸ್ಸಿನ ಮಿಡಿತಕ್ಕೆ ತಕ್ಕಂತೆ ವಾದ್ಯಗಳು ಸ್ಪಂದಿಸುತ್ತವೆ. ಹಾಗಾದರೆ, ಸಂಗೀತಗಾರ ಮತ್ತು ವಾದ್ಯಗಳ ನಡುವೆ ಭಾಷೆಯೊಂದಿಲ್ಲವೇ? ಕುಂಚಗಾರ ಮತ್ತು ಕುಂಚ–ಬಣ್ಣಗಳ ನಡುವೆ ಭಾವಕೋಶವೊಂದು ಕೆಲಸ ಮಾಡುವುದಿಲ್ಲವೆ?

ಪ್ರಾಣಿಗಳೊಂದಿಗೆ, ಮರಗಳೊಂದಿಗೆ, ಮೋಡಗಳೊಂದಿಗೆ ಮಾತನಾಡುವ ಕಥನಗಳು ಭಾರತೀಯ ಪರಂಪರೆಯಲ್ಲಿ ಸಾಕಷ್ಟಿವೆ. ಕಾಳಿದಾಸ ಮೇಘಗಳನ್ನು ದೂತರನ್ನಾಗಿಸಿದ. ರಾಮಕೃಷ್ಣ ಪರಮಹಂಸರು ಕಾಳಿಕಾದೇವಿಯೊಂದಿಗೆ ಮಾತನಾಡುತ್ತಿದ್ದರಂತೆ. ಜನಪದ ಕಥೆಗಳಲ್ಲಿ ಕತ್ತೆ, ಕಪ್ಪೆ, ನರಿ, ನಾಯಿಗಳೆಲ್ಲ ಜನರೊಂದಿಗೆ ಮಾತನಾಡುತ್ತವೆ. ಇಷ್ಟೇ ಅಲ್ಲ, ಕಲ್ಲುಗಳನ್ನು ಮಾತನಾಡಿಸುವವರೂ ಇದ್ದಾರೆ. ಈಗಲೂ ದೇಗುಲಗಳಲ್ಲಿ ನೆರೆಯುವ ಜನಸ್ತೋಮವನ್ನು ಗಮನಿಸಿದರೆ, ದೈವದೊಂದಿಗೆ ಮಾತನಾಡುವ ಮನುಷ್ಯನ ಪ್ರಯತ್ನ ಪ್ರಕೃತಿಯಷ್ಟೇ ಪುರಾತನವಾದುದು ಹಾಗೂ ನಿರಂತರವಾದುದು ಎನ್ನಿಸುತ್ತದೆ. ಮುಂಜಾನೆ ಪೂರ್ವಕ್ಕೆ ಮುಖಮಾಡಿ ಕೈಮುಗಿಯುವ ಪ್ರಕ್ರಿಯೆಯಲ್ಲೂ ಒಂದು ಭಾಷೆಯಿಲ್ಲವೆ? ಮೂರ್ತಿರೂಪದ ಭಗವಂತ ಮತ್ತು ಭಕ್ತರ ನಡುವಿನ ಸಂವಹನ ಯಾವ ಭಾಷೆಯ ತರ್ಕಕ್ಕೂ ನಿಲುಕುವಂತಹದ್ದಲ್ಲ. ‘ಮಾತಾಡು ಮಾತಾಡು ಲಿಂಗವೇ... ಮಾತಾಡದಿದ್ದರೆ ನಾ ತಾಳಲಾರೆನು ಲಿಂಗವೇ’ ಎನ್ನುವ ಮನಸ್ಥಿತಿ ಸುಲಭಕ್ಕೆ ನಿಲುಕುವಂತಹದ್ದೂ ಅಲ್ಲ.

ತಮ್ಮಷ್ಟಕ್ಕೆ ತಾವು ಮಾತನಾಡಿಕೊಳ್ಳುವವರನ್ನು ಜಗತ್ತು ‘ಮರುಳ’ ಎನ್ನುತ್ತದೆ; ಉದಾತ್ತ ನೆಲೆಯಲ್ಲಿ, ಅಧ್ಯಾತ್ಮದ ಅನ್ವೇಷಕ ಎನ್ನುತ್ತದೆ. ಗಿಡಮರಗಳೊಂದಿಗೆ ಮಾತನಾಡುವವರು, ಅಚೇತನ ರೂಪಗಳನ್ನು ಮಾತಿಗೆಳೆಯುವವರೂ ಮರುಳರೇ. ಆದರೆ, ಈ ಮರುಳರ ದೃಷ್ಟಿಯಲ್ಲಿ ಇಡೀ ಜಗತ್ತೇ ಹುಚ್ಚರ ಸಂತೆಯಾಗಿ ಕಾಣಿಸಿದಲ್ಲಿ ಅಚ್ಚರಿಯೇನೂ ಇಲ್ಲ. ಹಾಗೆಯೇ ನಾವೆಲ್ಲರೂ ಒಂದಲ್ಲಾ ಒಂದು ಸಂದರ್ಭದಲ್ಲಿ ಮರುಳರಾಗಿರುತ್ತೇವೆ. ನಮಗೆ ತಿಳಿಯದಂತೆಯೇ ಯಾವುದೋ ಸಂದರ್ಭದಲ್ಲಿ ಗಿಡಮರವನ್ನೋ ಕರುವನ್ನೋ ನಾಯಿಯನ್ನೋ ಮಾತನಾಡಿಸಿರುತ್ತೇವೆ. ಕನಿಷ್ಠ, ಅಗೋಚರ ಶಕ್ತಿಯೊಂದಿಗಾದರೂ ನಮ್ಮ ಭಾವಪ್ರಪಂಚವನ್ನು ಹಂಚಿಕೊಂಡಿರುತ್ತೇವೆ. ಮರುಳನಲ್ಲದ ಓರ್ವನಾದರೂ ಈ ಜಗದಲುಂಟೆ ಎಂದು ಹುಡುಕಿದರೆ ಬಹುಶಃ ಸಿಗಲಾರರೇನೊ? ಹಾಗೆ ಹುಡುಕುವುದೂ ಮರುಳುತನ ಆಗಬಹುದೇನೊ?

ಮಾತು ಯಾರೊಂದಿಗಾದರೂ, ಚರ–ನಿಶ್ಚಲ ವಸ್ತು–ಸ್ವರೂಪದೊಂದಿಗೂ ಸಾಧ್ಯವಾಗುವಂತಹದ್ದು ಎನ್ನುವುದೇ ನಿಜ. ನಮ್ಮ ಮಾತಿಗೆ ಎದುರುಗಡೆಯಿಂದ ಪ್ರತಿಕ್ರಿಯೆ ಬಾರದಿರಬಹುದು ಅಥವಾ ಆ ಸ್ಪಂದನ ನಮಗೆ ಅರ್ಥವಾಗದಿರಬಹುದು, ಗೋಚರಿಸದಿರಬಹುದು. ಹಾಗೆಂದು, ಸಂವಹನವೇ ಸಾಧ್ಯವಾಗಿಲ್ಲವೆಂದು ಹೇಳಲಾಗದು.

ಮರಗಿಡಗಳೊಂದಿಗೆ, ಪ್ರಾಣಿಗಳೊಂದಿಗೆ, ಒಟ್ಟಾರೆ ಪ್ರಕೃತಿಯೊಂದಿಗೆ ಮಾತನಾಡುವುದನ್ನು ಮತ್ತೊಂದು ರೀತಿಯಲ್ಲೂ ನೋಡಲಿಕ್ಕೆ ಸಾಧ್ಯವಿದೆ. ಅದು, ತನ್ನದಲ್ಲದ ಜಗತ್ತನ್ನು ಅರಿಯುವ ಪ್ರಕ್ರಿಯೆ. ಈ ಮಾತುಕತೆ ಪ್ರಕೃತಿಯೊಂದಿಗಿನ ನಮ್ಮ ಸಂಬಂಧವನ್ನು ಗಾಢಗೊಳಿಸುತ್ತದೆ. ಪರಿಸರ ಮಾಲಿನ್ಯದ ಬಿಸಿ ಸಮಷ್ಟಿಯಿಂದ ಪ್ರತಿಯೊಬ್ಬ ವ್ಯಕ್ತಿಯ ತಲೆಬಿಸಿಯೂ ಆಗಿರುವ ವರ್ತಮಾನದಲ್ಲಿ, ಪ್ರಕೃತಿಯೊಂದಿಗಿನ ಮಾತುಕತೆಗೆ ವಿಶೇಷ ಮಹತ್ವವಿದೆ. ಈ ಮಾತುಕತೆ ನಮ್ಮನ್ನು ನಾವು ಅರಿವ ಪಯಣವೂ ಹೌದು. ಆತ್ಮದ ಅರಿವಿನ ಅಧ್ಯಾತ್ಮದೊಂದಿಗಿನ ಸರಳ ಅನುಸಂಧಾನವೂ ಹೌದು.

ಪ್ರಕೃತಿಯೊಂದಿಗೆ ಮಾತನಾಡುವುದನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳುವುದು ಇಂದಿನ ಜರೂರು. ವಿಪರ್ಯಾಸವೆಂದರೆ, ಪ್ರಕೃತಿಯೊಂದಿಗೆ ಮಾತನಾಡುವುದಿರಲಿ, ಬಂಧುಮಿತ್ರರೊಂದಿಗೆ ಮಾತನಾಡುವುದೇ ಕಷ್ಟವಾಗುತ್ತಿರುವ ದಿನಗಳಿವು. ನಮ್ಮ ಮಾತುಕತೆಯೂ ಡಿಜಿಟಲ್ ರೂಪ ಪಡೆದುಕೊಂಡುಬಿಟ್ಟಿದೆ. ಕಣ್ಣಲ್ಲಿ ಕಣ್ಣು ನೆಟ್ಟು ಮಾತನಾಡುವುದಕ್ಕಿಂತಲೂ ಮೊಬೈಲ್ ಪರದೆಯೇ ಹೆಚ್ಚು ಸತ್ಯವೆನ್ನಿಸಿ, ಅದರ ಮೂಲಕ ಸಂದೇಶ ಕಳಿಸುವುದೇ ಸುಲಭ ಎನ್ನುವಂತಾಗಿದೆ. ಸಂವಹನದ ಕಾರಣಕ್ಕಾಗಿ ನಾವೇ ಸೃಷ್ಟಿಸಿಕೊಂಡಿರುವ ‘ಡಿಜಿಟಲ್ ಗೋಡೆ’ ಈಗ ತನ್ನ ಚೌಕಟ್ಟನ್ನು ಮೀರಿ ಮನಸ್ಸುಗಳ ನಡುವಿನ ಕಂದಕದ ರೂಪ ಪಡೆದುಕೊಳ್ಳುತ್ತಿದೆ. ಆತಂಕ ಪಡಬೇಕಾದ ಸಂಗತಿಯಿದು.

**■ ಚಂಪಕಮಾಲಾ**

## ಮಾತೇ ಮುತ್ತು

- ಸೋಲು ಎಂಬುದು ಮತ್ತೊಮ್ಮೆ ಹೆಚ್ಚು ಚೈತನ್ಯದಿಂದ ಯತ್ನಿಸಲು ಸಿಗುವ ಒಂದು ಅವಕಾಶ

  –ಡಿ.ವಿ.ಜಿ.

- ಸುಖವನ್ನು ಸಹಿಸುವ ಶಕ್ತಿ ಒಬ್ಬನಿಗಿದ್ದರೆ ದುಃಖವನ್ನು ಸಹಿಸುವ ಶಕ್ತಿ ನೂರಾರು ಮಂದಿಗಿರುತ್ತದೆ.

  –ಥಾಮಸ್ ಕಾರ್ಲೈಲ್

- ಕೋಪವನ್ನು ನಿಯಂತ್ರಿಸದಿದ್ದರೆ ಅದು ನಮ್ಮ ಮನಸ್ಸಿನ ಜ್ಯೋತಿಯನ್ನು ನಂದಿಸಿಬಿಡುತ್ತದೆ.

  –ಇಂಗರ್ ಸಾಲ್

- ಹೇಡಿ ಮನುಷ್ಯ ಉಸಿರಾಡಲ್ಲ, ಗೆಲ್ಲಲಾರ.

  –ಸ್ವಾಮಿ ವಿವೇಕಾನಂದ

- ನಿಮ್ಮ ಮುಖವನ್ನು ಯಾವತ್ತೂ ಸೂರ್ಯನಿಗೆ ಅಭಿಮುಖವಾಗಿಟ್ಟುಕೊಳ್ಳಿ. ನೆರಳು ಹಿಂದಕ್ಕೆ ಸರಿಯುತ್ತದೆ.

  –ವಾಲ್ಟ್ ವಿಟ್ಮನ್

- ಸುಳ್ಳು ಹೇಳುವುದರಿಂದ ಯಾರದ್ದಾದರೂ ಪ್ರಾಣ ಉಳಿಯುವಂತಿದ್ದರೆ ಅದು ಪಾಪ ಆಗುವುದಿಲ್ಲ.

  –ರವೀಂದ್ರನಾಥ ಟ್ಯಾಗೋರ್